ಕನ್ನಡ ಬಳಗ ಯು ಕೆ ಅರ್ಪಿಸುವ

# ಸಂದೇಶ ೨೦೨೦

## ಯುಗಾದಿ ಸಂಚಿಕೆ



ಸಂಪಾದಕರು : ಡಾ ಜಿ.ಎಸ್.ಶಿವಪ್ರಸಾದ್

ಸಂಪಾದಕ ಮಂಡಳಿ : ಶಿವಪ್ರಸಾದ್, ಶ್ರೀವತ್ಸ ದೇಸಾಯಿ, ಮತ್ತು ಡಾ.ರಶ್ಮಿಮಂಜುನಾಥ

ವಿನ್ಯಾಸ : ಶ್ರೀನಿವಾಸ ಮಹೇಂದ್ರಕರ್

# ಸಂಪಾದಕರ ನುಡಿ

**ಯುಗಾದಿ** ಹಬ್ಬವು ಪ್ರತಿ ವರುಷ ಮರಳಿ ಬರುತ್ತಿದೆ. ವಸಂತ ಋತುವಿನ ಆಗಮನವನ್ನು ಹಾಗೂ ಒಂದು ಕಾಲದ ಅಂತ್ಯವನ್ನು ಕಂಡು ಹೊಸ ವರ್ಷಕ್ಕೆ ಕಾಲಿಡುವ ಸಂಭ್ರಮದ ಹಬ್ಬ ಯುಗಾದಿ. ಆ ವಸಂತ ಹಬ್ಬ ನಮ್ಮ ಬದುಕಿನಲ್ಲಿ ಜೀವ ಕಳೆಯನ್ನು ತಂದಿರುವುದರ ಬಗ್ಗೆ ವರಕವಿ ದಾ. ರಾ. ಬೇಂದ್ರೆ ನಮಗೆ ಚಿರಪರಿಚಿತವಾದ "ಯುಗ ಯುಗಾದಿ ಕಳೆದರು" ಎಂಬ ಜನಪ್ರಿಯ ಗೀತೆಯಲ್ಲಿ ಹೇಗೆ ಹೇಳಿದ್ದಾರೆ;

**"ಹೊಂಗೆ ಹೂವ ತೊಂಗಲಲ್ಲಿ**
**ಭೃಂಗದ ಸಂಗೀತ ಕೇಲಿ**
**ಮತ್ತೆ ಕೇಳ ಬರುತಿದೆ**
**ಬೇವಿನ ಕಹಿ ಬಾಳಿನಲ್ಲಿ**
**ಹೂವಿನ ನಸುಗಂಪು ಸೂಸಿ**
**ಜೀವಕಳೆಯ ತರುತಿದೆ"**

ನಿಸರ್ಗವು ವರುಷಕ್ಕೊಮ್ಮೆ ಹೊಸ ಜನ್ಮವನ್ನು ಪಡೆದಾಗ ನಮಗೆ ತರುವ ಹರ್ಷವನ್ನು ಈ ಮೇಲಿನ ಸಾಲುಗಳಲ್ಲಿ ಕಾಣಬಹುದು . ಇನ್ನು ಇಂಗ್ಲೆಂಡಿನಲ್ಲಿ ವಸಂತ ಋತುವಿನ ಆಗಮನವನ್ನು ಡ್ಯಾಫೋಡಿಲ್ಸ್ ಮತ್ತು ಚೆರಿ ಹೂಗಳ ಅಂದ ಚೆಂದದಲ್ಲಿ ಕಾಣಬಹುದು. ವರ್ಡ್ಸ್ ವರ್ತರ ಕವನಗಳಲ್ಲಿ ಈ ಹೂಗಳ ಸೌಂದರ್ಯ ಪ್ರತಿಮೆಗಳಾಗಿರುವುದಲ್ಲದೆ ಬದುಕಿನ ನಶ್ವರತೆಯನ್ನೂ ಪ್ರತಿಬಿಂಬಿಸುತ್ತವೆ. ಬೇವು ಬೆಲ್ಲವು ಹೊಸವರ್ಷದ ಹಾದಿಯಲ್ಲಿ ಕಾಲಿಡುವ ನಮಗೆ ಮುಂದೆ ಬರುಲಿರುವ ಬದುಕಿನ ಏರು ಪೆರುಗಳ ಮತ್ತು ಕಷ್ಟ ಸುಖಗಳ ಸಾಂಕೇತಿಕ ಕುರುಹಗಳಾಗಿ ನಮನ್ನು ಸನ್ನದ್ಧಗೊಳಿಸಿದೆ

ನಮ್ಮ ಬಳಗ ಈ ವರ್ಷದ ಯುಗಾದಿಯನ್ನು ಇಂಗ್ಲೆಂಡಿನ ಮಧ್ಯ ಪ್ರದೇಶವಾದ ನಾಟಿಂಗ್ ಹ್ಯಾಮಿನಲ್ಲಿ ಆಚರಿಸಲಾಗುತ್ತಿದೆ. ಈ ನಗರ ಉತ್ತಮವಾದ ವಿಶ್ವವಿದ್ಯಾಲಯ, ಶೆರ್ವುಡ್ ಕಾಡು, ಕಸೂತಿ ಕೆಲಸ ಮತ್ತು ಇಲ್ಲಿ ನಡೆಯುವ ಫುಟ್ ಬಾಲ್ ಮತ್ತು ಕ್ರಿಕೆಟ್ ಪಂದ್ಯಗಳಿಂದ ಪ್ರಖ್ಯಾತವಾಗಿದೆ. ಶೆರ್ವೂಡ್ ಕಾಡಿನಲ್ಲಿರುವ ಮರಗಳು ಶೇಕ್ಸಪಿಯರ್ ನಿಂದ ಹಿಡಿದು ಇಂದಿನ ರಾಣಿ ಎಲಿಜಬೆಥ್ ವರೆಗೆ ನಡೆದ ನೂರಾರು ವರ್ಷಗಳ ಇತಿಹಾಸವನ್ನು ಕಂಡಿದೆ. ಲೆಜೆಂಡ್ ರಾಬಿನ್ ಹುಡ್ ಶ್ರೀಮಂತರಿಂದ ಶೋಷಿತರಾದ ಜನಸಾಮಾನ್ಯರಿಗೆ ದೀನಬಂಧುವಾಗಿ ಬದುಕಿದ್ದು ಇದೇ ಪರಿಸರದಲ್ಲಿ, ಬಹುಶ ರಾಬಿನ್ ಹುಡ್ ಹುಟ್ಟುಹಾಕಿದ ಸಮಾನತೆಗಳು ಮತ್ತು ಸಾಮಾಜಿಕ ನ್ಯಾಯ ಮುಂದೆ ಈ ನಾಡಿನ ಪ್ರಜಾಪ್ರಭುತ್ವಕ್ಕೆ ಮತ್ತು ಸೋಷಿಯಲಿಸ್ಟ್ ಪರಿಕಲ್ಪನೆಗಳಿಗೆ ಬುನಾದಿಯಾಗಿರಬಹುದು. ಇಂತಹ ಹೆಮ್ಮೆಯನಾಡಿನಲ್ಲಿ ಕನ್ನಡ ಬಳಗದ ಕಾರ್ಯಕ್ರಮ ನಡೆಯುತ್ತಿರುವುದು ವಿಶೇಷವಾದ ಸಂಗತಿ.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬಹುಮುಖ ಪ್ರತಿಭೆಯ ಜಯಂತ್ ಕಾಯ್ಕಿಣಿ ಆಗಮಿಸಲಿದ್ದಾರೆ. ಇವರು ಸಣ್ಣಕಥೆಗಳ ಸರದಾರ, ಕವಿ, ವಾಗ್ಮಿ, ನಾಟಕಕಾರ, ಹಲವಾರು ಜನಪ್ರಿಯ ಚಿತ್ರಗೀತೆಗಳನ್ನು - ಬರೆದಿದ್ದರೆ. ನಾಲ್ಕು ಬಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದ ಸಾಹಿತಿ.

ಹಿಂದೆ ಬಳಗದ ರಜತ ಮಹೋತ್ಸವದಲ್ಲಿ ಇವರು ಪಾಲ್ಗೊಂಡಿದ್ದು ಬಳಗಕ್ಕೆ ಈಗಾಗಲೇ ಪರಿಚಿತರು. ಯುಗಾದಿ ಕಾರ್ಯಕ್ರಮದಲ್ಲಿ ಇವರ ಮಾತುಗಳನ್ನು ಕೇಳಲು ನಾವೆಲ್ಲಾ ಕಾತುರರಾಗಿದ್ದೇವೆ. ಅವರ ಸಮ್ಮುಖದಲ್ಲಿ ಕನ್ನಡ ಬಳಗದ ಅನಿವಾಸಿ ತಂಡವು ಸಾಹಿತ್ಯ ಕಾರ್ಯಕ್ರಮವನ್ನು ನಡೆಸಿಕೊಡಲಿದೆ. ಇದು ಎಲ್ಲರಿಗೂ ತೆರವಾಗಿದೆ.

ಫಿಲ್ಮ್ ಫೇರ್ ಪ್ರಶಸ್ತಿಯನ್ನು ಒಳಗೊಂಡಂತೆ ಅನೇಕ ಪುರಸ್ಕಾರಗಳನ್ನು ಪಡೆದು ಸಂಗೀತದ ಹಲವು ಪ್ರಕಾರಗಳಲ್ಲಿ ಪರಿಣಿತರಾದ ಖ್ಯಾತ ಗಾಯಕಿ ಮತ್ತು ದಂತ ವೈದ್ಯೆ ಡಾ. ಶಮಿತಾ ಮಲ್ನಾಡ್ ಯುಗಾದಿ ಕಾರ್ಯಕ್ರಮದಲ್ಲಿ ಸಂಗೀತ ಸಂಜೆಯನ್ನು ನಡೆಸಿಕೊಡುತ್ತಿದ್ದಾರೆ. ಕನ್ನಡ ಬಳಗದ ಕಿರಿಯ ಹಿರಿಯ ಸದಸ್ಯರಿಂದ ಮನೋರಂಜನೆ ಕಾರ್ಯಕ್ರಮವನ್ನು ನಿರೀಕ್ಷಿಸಬಹುದು. ಸ್ಥಳೀಯ ಕಾರ್ಯಕರ್ತರು ಒಂದು ಸ್ಮರಣೀಯ ಕಾರ್ಯಕ್ರಮವನ್ನು ಒದಗಿಸುವ ಉದ್ದೇಶದಿಂದ ಸಕಲ ಸಿದ್ಧತೆ ಗಳನ್ನುಮಾಡಿಕೊಂಡಿದ್ದಾರೆ. ಕನ್ನಡ ಬಳಗದ ಯುಗಾದಿ ಕಾರ್ಯಕ್ರಮದಲ್ಲಿ ಭೇಟಿಯಾಗೋಣ , ನೀವು ಬನ್ನಿ, ನಿಮ್ಮ ಬಂಧು ಮಿತ್ರರನ್ನೂ ಕರೆತನ್ನಿ. ಯುಗಾದಿಯ ಶುಭಾಶಯಗಳು.

ಮರೆಯುವ ಮುನ್ನ .....'ಸಂದೇಶ' ಕನ್ನಡ ಬಳಗದ ಕಾರ್ಯಕ್ರಮಗಳ ಮತ್ತು ಸುದ್ದಿ ಸಮಾಚಾರಗಳ ವಾಹಿನಿಯಾಗಿದ್ದು ನಿರಂತರವಾಗಿ ನಿಮಗೆ ಬಳಗದ ಸುದ್ದಿಯನ್ನು ತಲುಪಿಸುತ್ತಿದೆ. ಇಲ್ಲಿಯವರೆಗೆ ಬಳಗದ ಒಳಗಿನ ಸುದ್ದಿಯನ್ನು ಕೊಡುತ್ತಿದ್ದು ಇನ್ನು ಮುಂದಕ್ಕೆ ನಮ್ಮೆಲ್ಲರಿಗೂ ಪ್ರಸ್ತುತವಾದ ಹಾಗು ನಮ್ಮ ಪರಿಸರದಲ್ಲಿ ನಡೆಯುತ್ತಿರುವ ಇತರ ಸುದ್ದಿಗಳನ್ನು ಸಂದೇಶದಲ್ಲಿ ವರದಿ ಮಾಡುವ ಒಂದು ಪ್ರಯತ್ನಮಾಡಿದ್ದೇವೆ. ಸಂದೇಶ ಪತ್ರಿಕೆಗೆ ಹೊಸ ಟ್ಯಾಬ್ಲಾಯ್ಡ್ ಸ್ವರೂಪವನ್ನು ಮತ್ತು ಹೊಸ ಆಯಾಮವನ್ನು ತರುವ ಪ್ರಯತ್ನ ಈ ಹೊಸ ಸಂಪಾದಕೀಯ ಮಂಡಳಿಯ ಉದ್ದೇಶವಾಗಿದೆ. 'ಸಂದೇಶ'ವನ್ನು ಸ್ವಾರಸ್ಯಗೊಳಿಸುವ ಸಲುವಾಗಿ ಕೆಲವು ಸಂಪಾದಕೀಯ ಸ್ವಾತಂತ್ರವನ್ನು ಸಂಪಾದಕ ಮಂಡಳಿಯು ಉಳಿಸಿಕೊಂಡಿದೆ. ನಿಮ್ಮ ಸಲಹೆಗಳನ್ನು ಮತ್ತು ಅಭಿಪ್ರಾಯಗಳನ್ನು ಸ್ವಾಗತಿಸುತ್ತೇವೆ.

**ಡಾ. ಶಿವಪ್ರಸಾದ್**

## ಬಿ. ಬಿ. ಸಿ ಸುದ್ದಿಯಲ್ಲದಿದ್ದರೂ ಬಿಸಿ ಬಿಸಿ ಸುದ್ದಿ.... ಯು.ಕೆ. ಕನ್ನಡಬಳಗದಲ್ಲಿ ಪ್ಲಾಸ್ಟಿಕ್ ನಿಷೇಧಿಸಲು ಕರೆ !



ಕಳೆದ ಕೆಲವು ದಿನಗಳ ಹಿಂದೆ ಕನ್ನಡ ಬಳಗದ ಯಾರ್ಕ್ ಶೈರ್ ಶಾಖೆ (YSKB) ಸಂಕ್ರಾತಿ ಸಂಜೆಯನ್ನು ಅದ್ದೂರಿಯಿಂದ ಶೇಫಿಲ್ಡ್ ನಗರದಲ್ಲಿ ಆಚರಿಸಿತು. ಆ ಶಾಖೆಯ ಕೆಲವು ಪರಿಸರ ಪ್ರೇಮಿಗಳು ಆ ಸಮಾರಂಭದಲ್ಲಿ ಪ್ಲಾಸ್ಟಿಕ್ ಹೊರತಾದ ಮತ್ತು ಪರಿಸರಕ್ಕೆ ಪೂರಕವಾದ ತಟ್ಟೆ ಲೋಟ ಇತ್ಯಾದಿಗಳನ್ನು ಉಪಯೋಗಿಸುವಂತೆ ಸೂಚಿಸಿದ್ದು ಅಂದಿನ ಕಾರ್ಯಕ್ರಮದಲ್ಲಿ ಸ್ವಲ್ಪ ಮಟ್ಟಿಗೆ ಪ್ಲಾಸ್ಟಿಕ್ ರಹಿತ ಪ್ಲೇಟ್ ಗಳನ್ನು ಬಳಸಿ ಅದರ ಉಪಯುಕ್ತತೆಯನ್ನು ಕಂಡುಕೊಳ್ಳಲಾಯಿತು. ಇದರ ಪರಿಣಾಮವಾಗಿ ಕನ್ನಡ ಬಳಗದ ಯುಗಾದಿ ದೀಪಾವಳಿ ಕಾರ್ಯಕ್ರಮಗಳಲ್ಲಿ ಇನ್ನು ಮುಂದಕ್ಕೆ ಪ್ಲಾಸ್ಟಿಕ್ ನಿಷೇಧಿಸಿ ಇತರ ಪರಿಸರ ಪೂರಕ ತಟ್ಟೆ ಪ್ಲೇಟ್ ಲೋಟ ಇತ್ಯಾದಿಗಳನ್ನು ಉಪಯೋಗಿಸುವಂತೆ ಸೂಚಿಸಲಾಯಿತು. ಕನ್ನಡ - ಬಳಗದ ಕಾರ್ಯಕಾರಿ ಸಮಿತಿಯಲ್ಲಿ ಈ ವಿಚಾರ ಪ್ರಸ್ತಾಪಗೊಂಡು ಹಣದ ಅಭಾವಿದಿಂದ ಈ ಬಾರಿ ಸಾಧ್ಯವಿಲ್ಲವೆಂದಾಗ ಯಾರ್ಕ್ ಶೈರ್ ಶಾಖೆ ಸದಸ್ಯರು ಇದರ ವೆಚ್ಚವನ್ನು ನಿಭಾಯಿಸಲು ಒಪ್ಪಿಕೊಂಡಿದ್ದಾರೆ. ಹೀಗೆ ಕೂಡಿಟ್ಟ ಮೊತ್ತವನ್ನು ನಮ್ಮ ಶಾಖೆಯ ಒಬ್ಬ ಪರಿಸರ ಪ್ರೇಮಿ ತಮ್ಮ ಕೈಯಿಂದ ಇನ್ನೂ ಹೆಚ್ಚಿನ ಹಣವನ್ನು ಸೇರಿಸಿ ವೃದ್ಧಿಗೊಳಿಸಿದರು. ಅವರು ತಮ್ಮ ಹೆಸರನ್ನು ಪ್ರಕಟಿಸದೆ ಅನಾಮಧೇಯರಾಗಿ ಉಳಿದಿರುವುದು ಅವರ ಸರಳ ಮತ್ತು ನಿಸ್ವಾರ್ಥ ನಿಲುವಿಗೆ ಸಾಕ್ಷಿಯಾಗಿದೆ. ಯಾರ್ಕ್ ಶೈರ್ ಶಾಖೆ ಸದಸ್ಯರ ಈ ಪರಿಸರ ಪ್ರಜ್ಞೆ ಮತ್ತು ಕಾಳಜಿಗಳು ಶ್ಲಾಘನೀಯ. ಪ್ಲಾಸ್ಟಿಕ್ ನಿಷೇಧಗೊಳಿಸುವ ವಿಚಾರದ ಬಗ್ಗೆ ಕನ್ನಡ ಬಳಗದ ಸರ್ವ ಸದಸ್ಯರ ಸಭೆಯಲ್ಲಿ ಚರ್ಚೆಯಾಗಬೇಕಂದು ಮನವಿಮಾಡಿಕೊಳ್ಳಲಾಗಿದೆ.

**Y.S.K.B ಕಾರ್ಯಕಾರಿ ಸಮಿತಿ**

## ಇಣುಕು-ಕೆಣಕು ಮತ್ತು ಲಘು-ನಗು

"ಅ ಆ ಇ ಈ ಕಲಿತರೆ ಕನ್ನಡ ಓದಲು ಬಲು ಸುಲಭ" ಎಂಬ ಇಂಡಿಯಾ vs ಇಂಗ್ಲೆಂಡ್ ಸಿನಿಮಾ ಗೀತೆಯನ್ನು ನಮ್ಮ ಅನಿವಾಸಿ ಕನ್ನಡಿಗ ಡಾ.ನಂದಕುಮಾರ್ ಅವರು ಬರೆದು ಈಗಾಗಲೇ ಚಾಲನೆಯಲ್ಲಿರುವ 'ಕನ್ನಡ ಕಲಿ' ಚಟುವಟಿಕೆಗೆ ಪುಷ್ಟಿಯನ್ನು ನೀಡಿದ್ದಾರೆ. ಡಾ.ನಂದಕುಮಾರ್ ಅವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮುಂದಿನ ಅಧ್ಯಕ್ಷರಾಗಿ ಆಯ್ಕೆ ಮಾಡಬೇಕೆಂದು ನಮ್ಮ ಬಳಗದ ಸದಸ್ಯರು ಸರ್ಕಾರವನ್ನು ಕೋರಿದ್ದಾರೆ!

"ಆ ದಿನಗಳು, ಆಟಗಾರ ಅಮ್ಮ ಐ ಲವ್ಯೂ ಆದ್ಯ" ಹೀಗೆ ಬರಿ 'ಅ' ಕಾರದಿಂದ ಶುರುವಾಗುವ ಸಿನಿಮಾಗಳನ್ನು ಮಾಡಿಕೊಂಡು ಬಂದ - ಖ್ಯಾತ ನಿರ್ದೇಶಕ ಕೆ ಎಂ ಚೈತನ್ಯ ಅವರು 'ಅ' ಕಾರದಲ್ಲಿ ಸ್ಟಕ್ ಆಗಿ ಬಿಟ್ಟಿದ್ದಾರೆ. ಅವರು ಮತ್ತು ಅವರ ಸಿನಿಮಾ ತಂಡ,ಡಾ.ನಂದಕುಮಾರ್ ಅವರ 'ಕನ್ನಡ ಕಲಿ' ಗೀತೆಯಿಂದ ಸ್ಪೂರ್ತಿ ಪಡೆಯಲಿ ಎಂದು ಚೈತನ್ಯ ಅಭಿಮಾನಿಗಳು ಅಪೇಕ್ಷಿಸಿದ್ದಾರೆ.

ಮುಂಗಾರು ಮಳೆ ಚಿತ್ರದ "ಮುಂಗಾರು ಮಳೆಯೇ ಏನು ನಿನ್ನ ಹನಿಗಳ ಲೀಲೆ" ಎಂಬ ಜನಪ್ರಿಯ ಗೀತೆಯನ್ನು ರಚಿಸಿದ ಜಯಂತ್ ಕಾಯ್ಕಿಣಿ ನಮ್ಮ ಅತಿಥಿಗಳಾಗಿ ಇಲ್ಲಿಗೆ ಬಂದ ಮೇಲೆ ಇಂಗ್ಲೆಂಡ್ ಮಳೆಯ ಬಗ್ಗೆ ಯಾವ ರೀತಿಯ ಗೀತೆ ಬರೆಯಬಹುದು ಎಂಬ ಕುತೂಹಲ ಅನಿವಾಸಿಗಳಿಗಿದೆ. (ಪು.ತಿ.ನೋ)

ದಂತ ವೈದ್ಯೆ ಡಾ. ಶಮಿತಾ ಮಲ್ನಾಡ್ ಅವರು ಯುಗಾದಿ ಕಾರ್ಯಕ್ರಮದಲ್ಲಿ ಸಂಗೀತ ಸಂಜೆಯನ್ನು ನಡೆಸಿ ಕೊಟ್ಟ ಬಳಿಕ ಬಳಗದ ದಂತ ವೈದ್ಯ ವೈದ್ಯೆಯರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ಸಂಗೀತವನ್ನು ಅರಿಸಿಕೊಂಡು ಹೋಗಬಹುದೆಂದು ಶಂಕಿಸಲಾಗಿದೆ.


ಈ ಬಾರಿಯ ಯುಗಾದಿ ಕಾರ್ಯಕ್ರಮದಲ್ಲಿ ಬೇವು ಬೆಲ್ಲದ ಬದಲಾಗಿ sugar free option ಬೇವು - ಕ್ಯಾಂಡ್ರಿಲ್ ಒದಗಿಸಬೇಕೆಂದು ಸಕ್ಕರೆ ಖಾಯಿಲೆ ಇರುವ ಕೆಲವು ಸದಸ್ಯರು ಒತ್ತಾಯಿಸಿದ್ದಾರೆ.

ಕಳೆದ ದೀಪಾವಳಿಯ ಕಾರ್ಯಕ್ರಮದಲ್ಲಿ ರಾಜೇಶ್ ಕೃಷ್ಣನ್ ಅವರು Fast Numbers ಪ್ರಸ್ತುತ ಪಡಿಸಿ ಎಲ್ಲರೂ ಹುಚ್ಚೆದ್ದು ಕುಣಿಯುವಂತೆ ಮಾಡಿದರು. ಅಂದು ಬಹಳ ಉತ್ಸಾಹದಿಂದ ಕುಣಿದ ಒಬ್ಬ ಹಿರಿಯರು ಕಾಲು ಉಳುಕಿಸಿಕೊಂಡು ಕೆಲವು ವಾರಗಳು ಕುಂಟುತ್ತಾ ಕ್ರಚಸ್ ಹಿಡುದು ನಡೆಯಬೇಕಾಯಿತು. ಹೀಗಾಗಿ ಈ ಬಾರಿ ಯುಗಾದಿ ಸಂಗೀತ ಸಂಜೆಯಲ್ಲಿ ಶಮಿತಾ ಅವರಿಗೆ Fast Numbers ಕೈಬಿಡಬೇಕೆಂದು ಸ್ಥಳೀಯ ಆಯೋಜಕರು ಕೋರಿದ್ದಾರೆ.

**ಡಾ. ಶಿವಪ್ರಸಾದ್**

## ತೆರೆದಿದೆ ಮನೆ ಬಾ... ಓ ಅತಿಥಿ - ಯುಗಾದಿ ಕಾರ್ಯಕ್ರಮದ ಮೂವರು ಅತಿಥಿಗಳ ಪರಿಚಯ

### ಡಾ ಜಯಂತ್ ಕಾಯ್ಕಿಣಿ




ಈ ಸಲದ ಯುಗಾದಿ ಕಾರ್ಯಕ್ರಮಕ್ಕೆ ಯು.ಕೆ ಕನ್ನಡಬಳಗದ ಮುಖ್ಯ ಅತಿಥಿಯಾಗಿ ಡಾ ಜಯಂತ ಕಾಯ್ಕಿಣಿಯವರು ಬರುತ್ತಿರುವುದು ನಮ್ಮ ಸುದೈವ. ಈ ತಲೆಮಾರಿನ ಅತ್ಯಂತ ಪ್ರತಿಭಾವಂತ ಸಾಹಿತಿ, 'ಮಾಂತ್ರಿಕ ಕತೆಗಾರ,' ಕವಿ, ಅಂಕಣಕಾರ, ಟಿ.ವಿ.ಸಂದರ್ಶಕ, ಚಿತ್ರಕಥೆ-ಸಂಭಾಷಣೆ-ಚಿತ್ರಗೀತೆ ರಚನಾಕಾರ -ಹೀಗೆಲ್ಲ ಪ್ರಸಿದ್ಧರಾಗಿರುವವರು ಇವರು. ಅವರ ಕಥೆಗಳು ಇತರ ಭಾಷೆಗಳಲ್ಲೂ ಅನುವಾದಗೊಂಡಿವೆ. ಇತ್ತೀಚೆಗೆ ಅವರು ಬರೆದ ಮುಂಬಯಿ ಜೀವನಾಧಾರಿತ ಕತೆಗಳ ಇಂಗ್ಲಿಷ್ ಅನುವಾದಗಳ ಸಂಗ್ರಹ 'No presents, please'ಗೆ DSC ಅಂತರಾಷ್ಟ್ರೀಯ ಪುರಸ್ಕಾರ ಸಿಕ್ಕಿದೆ. ಅವರಿಗೆ ದೊರಕಿದ ಇನ್ನೆಲ್ಲ ಪುರಸ್ಕಾರಗಳನ್ನು ಉಲ್ಲೇಖಿಸಲಾರೆ. ಕೆಲವು ಹೀಗಿವೆ:ನಾಸಿಕ್ ದ 'ಕುಸುಮಾಗ್ರಜ' ರಾಷ್ಟ್ರೀಯ ಸಾಹಿತ್ಯ - ಪುರಸ್ಕಾರ (2010), ನಾಲ್ಕು ಸಲ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ (1974 -ಕವಿತೆ, 1982, 1989, 1996-ಕಥೆ), 'ಫಿಲ್ಮ್‌ಫೇರ್' ಶ್ರೇಷ್ಠ ಗೀತ ರಚನಾಕಾರ (2008, 2009,2016,2017), ಇತ್ಯಾದಿ. 2011 ರಲ್ಲಿ ತುಮಕೂರು ವಿ.ವಿ ಅವರಿಗೆ ಡಾಕ್ಟರೇಟ್ ಕೊಟ್ಟು ಗೌರವಿಸಿದೆ. 'ಮುಂಗಾರು ಮಳೆ'. 'ಗಾಳಿ ಪಟ', 'ಮಿಲನ' ಚಿತ್ರಗಳಲ್ಲಿಯ ಇವರು ರಚಿಸಿದ ಜನಪ್ರಿಯ ಸಿನಿಮಾ ಗೀತೆಗಳನ್ನು ನೀವು ಗುಣುಗುಣಿಸಿದ್ದನ್ನು ನೆನಪಿಸಿಕೊಳ್ಳಿ. ಇವರ ಹುಟ್ಟು: ಗೋಕರ್ಣ; ಇವರು ಪ್ರಸಿದ್ಧ ಸಾಹಿತಿಯ (ಗೌರೀಶ) ಪ್ರಸಿದ್ಧ ಪುತ್ರ;ಸ್ನಾತಕೋತ್ತರ ಶಿಕ್ಷಣ: ಧಾರವಾಡ; ವೃತ್ತಿ: ಮುಂಬಯಿಯಲ್ಲಿ ಬಯೋಕೆಮಿಸ್ಟಾಗಿ 23 ವರ್ಷ; -ಆ ಮಹಾನಗರದ ಬದುಕಿನ ಚಿತ್ರಣವನ್ನೆಲ್ಲ ಇವರ ಕಥೆಗಳಲ್ಲಿ ಕಾಣಬಹುದು. ಈಗ ಬೆಂಗಳೂರಲ್ಲಿ ವಾಸಿಸುತ್ತಾರೆ. ಇತ್ತೀಚೆಗಿನ ಸಂದರ್ಶನದಲ್ಲಿ ಅವರು ಹೇಳಿದ್ದು: "ನನಗೆ ಬೋರೇ ಆಗುವದಿಲ್ಲ, ನಮ್ಮ ಸುತ್ತಮುತ್ತಲಿನ ಬದುಕೇ ಬಹಳ ಇಂಟರೆಸ್ಟಿಂಗ್ ಆಗಿರುತ್ತದೆ!" ಇಂಥವರ ಮಾತು ಇನ್ನೆಷ್ಟು ಇಂಟೆರೆಸ್ಟಿಂಗ್ ಆಗಿರಲಿಕ್ಕಿಲ್ಲ? ಯುಕೆ ಕನ್ನಡ ಬಳಗದ ಯುಗಾದಿ ಕಾರ್ಯಕ್ರಮದಲ್ಲಿ ಅವರ ಮಾತನ್ನು ಕೇಳಲು ನಾನಂತೂ ಬಹಳೇ ಕಾತುರನಾಗಿದ್ದೇನೆ. ನೀವೂ, ಎಲ್ಲರೂ ಬನ್ನಿ!

**ಶ್ರೀವತ್ಸ ದೇಸಾಯಿ**

## ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು



**ಚಿತ್ರದುರ್ಗ** ಜಿಲ್ಲೆಯ ಸಿರಿಗೆರೆಯಲ್ಲಿನ ತರಳಬಾಳು ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಕನ್ನಡ ಬಳಗದ ಯುಗಾದಿ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಈ ಮಠದ ಆಡಳಿತದಲ್ಲಿ ಪ್ರಾಥಮಿಕ ಶಾಲೆಯಿಂದ ಹಿಡಿದು ಇಂಜಿನಿಯರಿಂಗ್ ಕಾಲೇಜಿನವರಗೆ 172 ಶಿಕ್ಷಣ ಸಂಸ್ಥೆಗಳಿವೆ. ಸುಮಾರು 40,000 ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ದೊರೆಯುತ್ತಿದೆ. ಆರು ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ಉಚಿತ ಊಟ ಮತ್ತು ವಸತಿಯ ಸೌಲಭ್ಯವಿದೆ. ಸ್ವಾಮೀಜಿಯವರು - ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದಿದ್ದಾರೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಪಿ. ಎಚ್. ಡಿ ಪದವಿಯನ್ನುಗಳಿಸಿದ್ದಾರೆ. ಸ್ವಾಮೀಜಿಯವರು ಸಾಹಿತ್ಯಾಸಕ್ತರು. ಅವರು ಹಲವಾರು ವರುಷಗಳಿಂದ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಿಸಿಲು ಬೆಳದಿಂಗಳು ಎಂಬ ಶೀರ್ಷಿಕೆಯಲ್ಲಿ ಅಂಕಣವನ್ನು ಬರೆಯುತ್ತಿದ್ದಾರೆ. ಈ ಅಂಕಣದಲ್ಲಿ ಹಲವಾರು ಸಾಮಾಜಿಕ ವಿಷಯಗಳನ್ನು ವಿಮರ್ಶಿಸಿ ಜನಸಾಮಾನ್ಯರಿಗೆ ಉತ್ತಮ ಮೌಲ್ಯಗಳನ್ನು ಆದರ್ಶಗಳನ್ನು ಸ್ವಾಮೀಜಿಯವರು ನೀಡಿದ್ದಾರೆ. ಮಠದ ಜಾಲ ಜಗುಲಿಯಲ್ಲಿ ವಚನಗಳ ಇಂಗ್ಲಿಷ್ ಅನುವಾದವನ್ನು ಕಾಣಬಹುದು. ಮಠವು ತರಳಬಾಳು ಹುಣ್ಣಿಮೆ ಎಂಬ ಮಹೋತ್ಸವನ್ನು ಸತತವಾಗಿ ನಡೆಸಿಕೊಂಡು ಬಂದಿದೆ. ಇಲ್ಲಿ ಕವಿತೆ, ಸಾಹಿತ್ಯ ಮತ್ತು ಸಾಮಾಜಿಕ ವಿಚಾರಗಳ ಬಗ್ಗೆ ಗೋಷ್ಠಿಗಳು ನಡೆಯುತ್ತವೆ.

■ **ಡಾ. ಶಿವಪ್ರಸಾದ್**

## ಡಾ. ಶಮಿತಾ ಮಲ್ನಾಡ್




ಸುಪ್ರಸಿದ್ದ ಚಲನಚಿತ್ರ ಹಿನ್ನಲೆ ಗಾಯಕಿಯಾದ ಡಾ. ಶಮಿತಾ ಮಲ್ನಾಡ್ ಅವರು ಚಲನಚಿತ್ರ ಹಿನ್ನಲೆ ಗಾಯಕಿಯಲ್ಲದೆ ಸಂಗೀತ ನಿರ್ದೇಶಕಿಯೂ ಹೌದು. ದಂತ ವೈದ್ಯರಾದ ಇವರ ಜನನ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ. ೧೯೯೯ರಲ್ಲಿ ಭಕ್ತಿಗೀತೆ ಆಲ್ಬಮ್ ' ಕಣಿವೆ ಕಬ್ಬಲಿ'ಯ ಮೂಲಕ ತಮ್ಮ ಹಾಡುವ ವೃತ್ತಿಯನ್ನ ಪ್ರಾರಂಭಿಸಿದರು.

ಅನೇಕ ಪ್ರಖ್ಯಾತ ಸಂಗೀತ ನಿರ್ದೇಶಕರ ನಿರ್ದೇಶನದಲ್ಲಿ ೮೫೦ ಕ್ಕೂ ಹೆಚ್ಚಿನ ಚಲನಚಿತ್ರಗಳಿಗೆ ಹಾಡನ್ನ ಹಾಡಿದ್ದಾರೆ. ಇದಲ್ಲದೆ, ಭಕ್ತಿಗೀತೆ, ಜಾನಪದಗೀತೆ, ಭಾವಗೀತೆ, ಸೂಫಿ, ವಚನ ಹಾಗು ಪಾಶ್ಚಿಮಾತ್ಯ ಗೀತೆಗಳನ್ನೂ ಹಾಡಿದ್ದಾರೆ. ಕರ್ನಾಟಕದ ಅನೇಕ ರಿಯಾಲಿಟಿ ಷೋಗಳಲ್ಲಿ ತೀರ್ಪುಗಾರರಾಗಿ ಕಾಣಿಸಿಕೊಂಡಿದ್ದಾರಲ್ಲದೆ, ಅನೇಕ ಕಾರ್ಯಕ್ರಮಗಳಿಗೆ ನಿರೂಪಣೆಯನ್ನ ಕೂಡ ಮಾಡಿದ್ದಾರೆ.

ಇವರನ್ನ ಅರಸಿ ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಅತ್ಯುತ್ತಮ ಮಹಿಳಾ ಹಿನ್ನಲೆ ಗಾಯಕಿಗಾಗಿ , ಫಿಲ್ಮ್ ಫೇರ್, ಸುವರ್ಣ ಫಿಲಂಸ್, ಸೌತ್ ಸ್ಕೋಪ್ ಫಿಲಂ ಹಾಗು ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳು ಸಂದಿವೆ. ಕನ್ನಡ ಬಳಗ ಯು. ಕೆ. ವತಿಯಿಂದ ಡಾ. ಶಮಿತಾ ಮಲ್ನಾಡ್ ಅವರಿಗೆ ಹೃತ್ಪೂರ್ವಕ ಸ್ವಾಗತ ಸುಸ್ವಾಗತ.

■ **ಡಾ. ರಶ್ಮಿ ಮಂಜುನಾಥ**

## ಅನಿವಾಸಿಗಳೇ ವಾಸಿ - ನಿಮಗಾಗಿ ಡುಂಡಿರಾಜ್ ಅವರ ಹನಿಗವನ



ಅನಿವಾಸಿಗಳೇ ವಾಸಿ

ಕನ್ನಡ ನಾಡಿನಿಂದ ಬಹಳ
ದೂರವಿರುವ ನೀವೆಲ್ಲ
ದಾಖಲೆಗಳ ಪ್ರಕಾರ ಅನಿವಾಸಿ

ನಿಮ್ಮ ಕನ್ನಡ ಪ್ರೀತಿ
ಕಂಡಾಗ ಅನ್ನಿಸಿತು
ನಮಗಿಂತ ನೀವೇ ವಾಸಿ!

ಡುಂಡಿರಾಜ್

## ಕನ್ನಡ ಬಳಗದ ದೀಪಾವಳಿ ಹಬ್ಬದಲ್ಲಿ ರಾಜೇಶ್ ಕೃಷ್ಣ ಎಂಬ ಢಂ ಪಟಾಕಿ !!



ಕನ್ನಡ ಬಳಗದ ೨೦೧೯ ದೀಪಾವಳಿ ಕಾರ್ಯಕ್ರಮವನ್ನು ಬರ್ಮಿಂಗ್ ಹ್ಯಾಮಿನಲ್ಲಿ ಅದ್ದೂರಿಯಿಂದ ಆಚರಿಸಲಾಯಿತು. ಸುಮಾರು ೬೦೦ ಕ್ಕೂ ಹೆಚ್ಚು ಕನ್ನಡಿಗರು ನೆರೆದಿದ್ದರು. ಕಾರ್ಯಕ್ರಮ ಸುವ್ಯವಸ್ಥಿತವಾಗಿ ನಡೆಯಿತು. ಎಲೆಕ್ಟ್ರಾನಿಕ್ ಸ್ಕ್ರೀನ್, ಬಣ್ಣ ಬಣ್ಣದ ಅಲಂಕಾರ ,ರಂಗ ಸಜ್ಜಿಗೆ ಸಮಾರಂಭಕ್ಕೆ ಮೆರುಗನ್ನು ತಂದುಕೊಟ್ಟಿತ್ತು. ಬಳಗದ ನೂತನ ಅಧ್ಯಕ್ಷೆ ಡಾ ಸ್ನೇಹ ಕುಲಕರ್ಣಿಯವರು ಎಲ್ಲರನ್ನು ಸ್ವಾಗತಿಸಿ ಶುಭಾಶಯಗಳನ್ನು ಕೋರಿದರು. ಬಳಗದ ಕಾರ್ಯಕಾರಿ ಸದಸ್ಯರು ವೇದಿಕೆಯ ಮೇಲೆ ಅತಿಥಿಗಳೊಡನೆ ಉಪಸ್ಥಿಯಲ್ಲಿದ್ದರು. ಆ ಕಾರ್ಯಕ್ರಮದ ವಿಶೇಷ ಅತಿಥಿ ಸ್ವಾಮಿ ಜಪಾನಂದಜಿ ಅವರು ಸಾಮಾನ್ಯವಾಗಿ ಸ್ವಾಮಿಗಳು ಮಾತನಾಡುವ ಧಾರ್ಮಿಕ ಮತ್ತು ಅಧ್ಯಾತ್ಮ ವಿಚಾರಗಳನ್ನು ಬದಿಗಿಟ್ಟು ಅಂದು ಒಬ್ಬ ಕನ್ನಡ ಭಾಷೆಯ ಮತ್ತು ಸಂಸ್ಕೃತಿಯ ರಾಯಭಾರಿಯಾಗಿ ಅದರ ಪರಂಪರೆಯನ್ನು, ಪ್ರಸ್ತುತತೆಯನ್ನು ಕುರಿತು ಮಾತನಾಡಿದರು. ಕನ್ನಡ ಭಾಷೆಯ ಉಳಿವಿನ ಬಗ್ಗೆಸ್ಪೂರ್ತಿದಾಯಕವಾದ ಮಾತುಗಳನ್ನಾಡಿದರು.

ಅಂದಿನ ಇನ್ನೊಬ್ಬ ಅತಿಥಿಗಳಾದ ಡಾ ನಂದ ಕುಮಾರ್ ಅವರು ತಮ್ಮ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ತಾವೇ ಬರೆದ ಒಂದು ಕವನದ ಮೂಲಕ ಕನ್ನಡ ನಾಡಿನ ಬಗ್ಗೆ ತಮಗೆ ಇರುವ ಪ್ರೀತಿಯನ್ನು ವ್ಯಕ್ತಪಡಿಸಿದರು.

ಅಂದು ಮಧ್ಯಾಹ್ನ ಕನ್ನಡ ಬಳಗದ ಸುಮಾರು ೨೫ ಸುಂದರಿಯರು ಕಾಮನ ಬಿಲ್ಲು ಎಂಬ ಒಂದು ಫ್ಯಾಶನ್ ಶೋ ನಡೆಸಿಕೊಟ್ಟರು. ಅವರ ಈ ಕಾಯಕ್ರಮದಲ್ಲಿ ಕರ್ನಾಟಕದ ಬೇರೆ ಬೇರೆ ಪ್ರದೇಶಗಳ ಉಡುಗೆ ತೊಡುಗೆ ಮತ್ತು ಸಾಂಸ್ಕೃತಿಕ ವೈಭವಗಳನ್ನು ಪರಿಚಯಿಸಿ ಕಾರ್ಯಕ್ರಮಕ್ಕೆ ಗ್ಲಾಮರ್ ತಂದುಕೊಟ್ಟರು. ದಿವ್ಯ ಭಟ್ ಅವರು ಕಥಕ್ ನೃತ್ಯ ಶೈಲಿಯಲ್ಲಿ ವಚನ ಸಾಹಿತ್ಯವನ್ನು ತಂದು ಒಂದು ಬಹಳ ಘನವಾದ ನೃತ್ಯ ಪ್ರದರ್ಶನವನ್ನು ನೀಡಿದರು. ಅಂದು ಸಂಜೆ ಬಳಗದ ಕಾರ್ಯದರ್ಶಿ ಡಾ ಗಿರೀಶ್ ವಸಿಷ್ಠ, ಮೈಸೂರಿನ ಮಹಾರಾಜ ಯದುವೀರ ಅವರು ಕನ್ನಡ ಬಳಗಕ್ಕೆ ನೀಡಿದ ಅಧಿಕೃತ ಶುಭ ಸಂದೇಶದ ವೀಡಿಯೊ ಪ್ರಸ್ತುತ ಪಡಿಸಿದರು. ಅಂದು ಸಂಜೆ ರಾಜೇಶ್ ಕೃಷ್ಣನ್ ಹಾಗೂ ಅವರ ಸಹಗಾಯಕಿರು ಮತ್ತು ಪಕ್ಕ ವಾದ್ಯದವರು ಎರಡು ತಾಸಿಗೂ ಮೀರಿದ ಚಿತ್ರಗೀತೆಗಳ ಅದ್ಭುತ ಕಾರ್ಯಕ್ರಮವನ್ನು ನೀಡಿದರು. ಇದರಿಂದ ಪುಳಕಗೊಂಡ ಕಿರಿಯ ಹಿರಿಯರು ತಮ್ಮ ಆಸೀನವನ್ನು ಬಿಟ್ಟು ಕುಣಿಯುವುದರ ಮೂಲಕ ಸಂಗೀತಕ್ಕೆ ಹುರುಪಿನಿಂದ ಸ್ಪಂದಿಸಿದರು.

## ಎಳ್ಳು ಬೆಲ್ಲಗಳ ನಡುವೆ  ಹೀಗೊಂದು ಸಂಕ್ರಾಂತಿ ಸಂಜೆ




**ಯಾರ್ಕ್ ಶೈರ್ ಕನ್ನಡ ಬಳಗ (YSKB) ಯು.ಕೆ** ಕನ್ನಡ ಬಳಗದ ಒಂದು ಸ್ಥಳೀಯ ಶಾಖೆ.ಇದು ರೂಪುಗೊಂಡು ಐದು ವರ್ಷಗಳು ತುಂಬಿವೆ. ಈ ಶಾಖೆ ಪ್ರತಿ ವರುಷ ಸಂಕ್ರಾತಿ  ಹಬ್ಬವನ್ನು  ಆಚರಿಸುತ್ತ ಬಂದಿದ್ದು ಈ ವರುಷ ಅದರ  ಐದನೇ ವಾರ್ಷಿಕ ಉತ್ಸವ ಶೆಫೀಲ್ಡ್ ಬಳಿ ಬಹಳ ಯಶಸ್ವಿಯಾಗಿ ಜರುಗಿತು. ವೈ. ಎಸ್. ಕೆ. ಬಿ. ಹುಟ್ಟಿದ ಸಮಯದಲ್ಲೇ ಅಸ್ತಿತ್ವಕ್ಕೆ ಬಂದ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಚಾರವೇದಿಕೆ (ಅನಿವಾಸಿ) ತನ್ನ ಐದನೇ ಮೈಲಿಗಲನ್ನು ದಾಟಿದ್ದು ಮತ್ತು ಈ ‘ಸಂಕ್ರಾಂತಿ ಸಂಜೆ’ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು  ವಿಶೇಷವಾದ ಸಂಗತಿ.  ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾದ ರೇಡಿಯೋ ಗಿರ್ಮಿಟ್ ಖ್ಯಾತಿಯ ಗೌರಿ ಪ್ರಸನ್ನ ಅವರು ಆಗಮಿಸಿದ್ದು ಎಲ್ಲರು ಅವರ ಸಂಕ್ರಾಂತಿಯ "ಹರಟೆ" ಯನ್ನು ಮೆಚ್ಚಿಕೊಂಡರು. ಸಂಕ್ರಾಂತಿಯ ವಿವಿಧ ಸಾಂಸ್ಕೃತಿಕ ರೂಪಗಳನ್ನು ಹಿನ್ನೆಲೆಗಳನ್ನು  ಅವರು ಪರಿಚಯಿಸಿದರು. ಅವರ ಹಾಸ್ಯ ಪ್ರಜ್ಞೆ ಹರಟೆಗೆ ಮೆರುಗನ್ನು ತಂದಿತ್ತು. ಗೌರಿ ಅವರ ನಿರ್ದೇಶನದಲ್ಲಿ  ಗಿಳಿವಿಂಡು ತಂಡದವರು ಗಿರೀಶ್ ಕಾರ್ನಾಡ್ ಅವರ ತಲೆದಂಡ ನಾಟಕದ ಕೆಲವು  ಸನ್ನಿವೇಶಗಳನ್ನು ಪ್ರಸ್ತುತ ಪಡಿಸಿದರು. ಬಸವಣ್ಣ ಮತ್ತು ಬಿಜ್ಜಳರ ನಡುವಿನ ಧಾರ್ಮಿಕ, ಸಾಮಾಜಿಕ ಬಿಕ್ಕಟ್ಟುಗಳು ಪರಿಣಾಮಕಾರಿಯಾಗಿ ರಂಗದ ಮೇಲೆ ಮೂಡಿಬಂದಿತು. ವಿವಿಡ್ ಲಿಪಿ ಎಂಬ ಪ್ರಕಾಶಕರು  ಕೆಲವು ಉತ್ತಮ ಪುಸ್ತಕಗಳನ್ನು ಪುಸ್ತಕ ಪ್ರದರ್ಶನದೊಂದಿಗೆ ಪರಿಚಯಿಸಿದರು. ಅನಿವಾಸಿ ಸದಸ್ಯರು ಅನಿವಾಸಿ ನಡೆದುಬಂದ ದಾರಿಯನ್ನು ಒಂದು ಸಂವಾದದ ಮೂಲಕ ಪ್ರಸ್ತುತಿ ಪಡಿಸಿದರು. ಕವಿ ನೋಡಿ ಕವಿತೆ ಕೇಳಿ ಎಂಬ ಶೀರ್ಷಿಕೆಯಲ್ಲಿ ಅನಿವಾಸಿ ಕವಿಗಳು ತಮ್ಮ ಲಘು ಕವನಗಳನ್ನು ಓದಿದರು. ಶಾಖೆಯ ಸದಸ್ಯರು ಹಲವಾರು ಉತ್ಕೃಷ್ಟ ಮನೋರಂಜನೆಯ ಕಾರ್ಯಕ್ರಮಗಳನ್ನು ಒದಗಿಸಿದರು. ವಿಜಯೇಂದ್ರ ಮತ್ತು ಶ್ರೀದೇವಿ ದಂಪತಿಗಳು ಸಂಗೀತಕಾರ್ಯಕ್ರಮವನ್ನು ನೀಡಿದರು.

## ೧೧ ಡೌನಿಂಗ್ ಸ್ಟ್ರೀಟಿನಲ್ಲಿ ಒಗ್ಗರಣೆಯ ವಾಸನೆ...



ಇನ್ಫೋಸಿಸ್ ಸಂಸ್ಥಾಪಕರಾದ ನಾರಾಯಣ ಮೂರ್ತಿ ಮತ್ತು ಸುಧಾ ಮೂರ್ತಿ ಅವರ ಅಳಿಯ ರಿಷಿ ಸುನಕ್ ಮೊನ್ನೆ ಬೋರಿಸ್ ಜಾನ್ಸನ್ ಅವರ ಮಂತ್ರಿ ಮಂಡಲದಲ್ಲಿ ಚಾನ್ಸಲರ್ ಆಗಿ ನೇಮಕಗೊಂಡಿದ್ದಾರೆ. ಕಳೆದ ಐದು ವರ್ಷಗಳಿಂದ  ಯಾರ್ಕ್ ಬಳಿಯ ರೀಚ್ಮಂಡ್ ಕ್ಷೇತ್ರದ ಎಂಪಿಯಾಗಿ ಆಯ್ಕೆಯಾಗಿದ್ದಾರೆ. ಇವರು ಆಕ್ಸ್ ಫೋರ್ಡ್ ನಲ್ಲಿರುವ ಲಿಂಕನ್ ಕಾಲೇಜಿನಲ್ಲಿ ಓದಿ ನಂತರ ಕ್ಯಾಲಿಫೋರ್ನಿಯಾದ ಪ್ರತಿಷ್ಠಿತ ಸ್ಟ್ಯಾಮ್ ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಎಂಬಿಯೇ ಪದವಿಪಡೆದಿದ್ದಾರೆ. ಅಲ್ಲಿ ಅವರು ನಾರಾಯಣ ಮೂರ್ತಿ ಅವರ ಮಗಳಾದ  ಅಕ್ಷತಾ ಅವರನ್ನು ಭೇಟಿಯಾದದ್ದು. ರಿಷಿ ಗೋಲ್ಡ್ಮನ್ ಸ್ಯಾಕ್ಸ್ , ಹೆಡ್ಜ್ ಫಂಡ್ ಮುಂತಾದ ಉನ್ನತ ಆರ್ಥಿಕ ಸಂಸ್ಥೆಗಳಲ್ಲಿ ಕೆಲಸಮಾಡಿದ್ದಾರೆ. ಇಲ್ಲಿಯವರೆಗೆ ಚಾನ್ಸಲರ್ ಆಗಿರುವವರ ಪಟ್ಟಿಯಲ್ಲಿ ರಿಷಿ ಅತ್ಯಂತ ಕಿರಿಯರು. ಅವರು ಎಂ ಪಿ ಆಗಿ ಸ್ಥಳೀಯ ಆಸ್ಪತ್ರೆ, - ಶಾಲೆ ಇವುಗಳ ಉಳಿವಿಗಾಗಿ, ರೈತರ ಮತ್ತು ಸ್ಥಳೀಯ ಉದ್ದಿಮೆದಾರರ ಏಳಿಗೆಗೆ ಕೆಲಸಮಾಡಿದ್ದಾರೆ. ರಿಷಿ ಸುನಾಕ್, ಪ್ರೀತಿಪಟೇಲ್  ಮತ್ತು ಅಲೋಕ್ ಶರ್ಮ ಸೇರಿದಂತೆ ಬೋರಿಸ್ ಜಾನ್ಸನ್ ಅವರ ಕ್ಯಾಬಿನೇಟಿನಲ್ಲಿ ಒಟ್ಟಾರೆ ಮೂರೂ ಮಂತ್ರಿಗಳು ಭಾರತದ ಮೂಲದವರಾಗಿದ್ದಾರೆ. 'ಕನ್ನಡದ ಅಳಿಯ' ರಿಷಿ ಸುನಾಕ್ ಅವರಿಗೆ ಕನ್ನಡ ಬಳಗದ ವತಿಯಿಂದ ಅಭಿನಂದನೆಗಳು. ಬ್ರೆಕ್ಸಿಟ್ ನಂತರದ ಆರ್ಥಿಕ ಬಿಕ್ಕಟ್ಟುಗಳನ್ನು ಪರಿಹರಿಸಲು ಅವರು ತಕ್ಕ ಮಂತ್ರಿಯೆಂದು ನಾವೆಲ್ಲಾ ಭಾವಿಸಿದ್ದೇವೆ.

## ಬ್ರಿಟನ್ನಿನ ಬಾಗಿಲು ತಟ್ಟುತ್ತಿರುವ ಕರಾಳ ಅತಿಥಿ ಕರೋನ ವೈರಸ್




ಚೈನಾದ ವುಹಾನ್ ನಗರದಲ್ಲಿ ಕೆಲವು ಪ್ರಾಣಿಗಳ ಮಾಂಸದಿಂದ ಮನುಷ್ಯನಿಗೆ ಸೇರಿಕೊಂಡ ಈ ಕರಾಳ ವೈರಸ್ ವುಹಾನ್ ದಾಟಿ ಹುಬೇ ಪ್ರದೇಶವನ್ನು ಮೀರಿ ಪೂರ್ವ ದೇಶಗಳಿಗೆ ಆಗಲೇ ನುಸುಳಿದೆ. ಮನುಷ್ಯನಿಂದ ಮನುಷ್ಯನಿಗೆ ಹರಡ ಬಹುದಾದ ಈ ವೈರಸ್ ಈಗ ಬ್ರಿಟನ್ನಿನ ಬಾಗಿಲನ್ನು ತಟ್ಟಿದೆ! ಇತ್ತೀಚಿನ ಸುದ್ದಿಯಂತೆ ಬ್ರಿಟನ್ನಿನಲ್ಲಿ ಸುಮಾರು ಮಂದಿಗೆ ಈ ವೈರಸ್ ಸೋಂಕಿರುವುದು ಅಧಿಕೃತವಾಗಿದೆ. ಚೈನಾ ದಲ್ಲಿ ಸಾವಿರಾರು ಜನರಿಗೆ ಈ ಸೋಂಕು ತಗಲಿ ಅಲ್ಲಿ ನೂರಾರು ಜನ ಸಾವಿಗೀಡಾಗಿದ್ದಾರೆ. ಒಟ್ಟಾರೆ ಈ ಪಿಡುಗನ್ನು ಗಮನಿಸಿದಾಗ ಈ ಸೋಂಕು ಎಲ್ಲರಿಗು ಮಾರಣಾಂತಿಕವಾಗಬಹುದು ಎಂದು ಪರಿಗಣಿಸಲಾಗುವುದಿಲ್ಲ. ಈ ಖಾಯಿಲೆಯನ್ನು ತಡೆಗಟ್ಟಲು ಬೇಕಾದ ವ್ಯಾಕ್ಸಿನ್ ತಯಾರಿಯಲ್ಲಿದೆ ಆದರೆ ಅದು ದೊರಕುವ ಹೊತ್ತಿಗೆ ವೈರಸ್ ಹರಡುವುದನ್ನು ತಡೆಗಟ್ಟಲು ಕೆಲವು ತುರ್ತು ಕ್ರಮಗಳನ್ನು ಪಬ್ಲಿಕ್ ಹೆಲ್ತ್ ಇಂಗ್ಲೆಂಡ್ ಆಲೋಚಿಸಿದೆ . ಫ್ಲೂ ಮತ್ತು ನಾರ್ವೋ ವೈರಸ್ ಗಳನ್ನು ಹತ್ತಿಕ್ಕುವ-ಮೂರು ಮಂತ್ರಗಳಾದ Catch it, Bin it, Kill it ಇವುಗಳನ್ನು ಪರಿಪಾಲಿಸಬೇಕೆಂದು ಆದೇಶಿಸಿದೆ. ಇದನ್ನು ಹೀಗೆ ಅರ್ಥಮಾಡಿಕೊಳ್ಳಬಹುದು ; ಹೊರಗೆ ಹೋಗಿ ಬಂದಾಗ ಕೈ ತೊಳೆಯುವುದು , ಸೀನು ಮತ್ತು ಕೆಮ್ಮುವಾಗ ಟಿಶ್ಯೂ ಬಳಸಿ ಅದನ್ನು ಬಿಸಾಡುವುದು. ಇನ್ನೊಂದು ಮುಖ್ಯವಾದ ವಿಷಯ ಚೈನಾ , ಜಪಾನ್, ಕೊರಿಯಾ, ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್, ಇಟಲಿ, ಇರಾನ್ ಅಲ್ಲದೇ ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿರುವ ಇತರೆ ದೇಶಗಳಿಗೆ ನೀವು ಭೇಟಿ ನೀಡಿದ್ದಲ್ಲಿ, ಹಿಂದಿರುಗಿ ಬಂದ ೧೪ ದಿನಗಳಲ್ಲಿ ನಿಮಗೇನಾದರೂ ಜ್ವರ ಮೈಕೈ ನೋವು, ನೆಗಡಿ ಕೆಮ್ಮು ಕಾಣಿಸಿಕೊಂಡಲ್ಲಿ ೧೧೧ ಸಂಖ್ಯೆಗೆ ಕರೆಮಾಡಿ ಮನೆಯ ಹೊರಗಿನ ಸಂಪರ್ಕವನ್ನು ಸಂಪೂರ್ಣವಾಗಿ ಬಿಟ್ಟು ಮನೆಯಲ್ಲೇ ಕುಳಿತು ೧೧೧ ಕೊಡುವ ಸಲಹೆಯನ್ನು ಪಾಲಿಸಬೇಕು ಎಂದು ಪಬ್ಲಿಕ್ ಹೆಲ್ತ್ ಸೂಚಿಸಿದೆ. ಮುಂಬರುವ ದಿನಗಳಲ್ಲಿ ಅಂತಾರಾಷ್ಟ್ರೀಯ ಅದರಲ್ಲೂ ದೂರ ಪೂರ್ವ ದೇಶಗಳ ಪ್ರವಾಸದ ಬಗ್ಗೆ ಎಲ್ಲರೂ ಗಮನ ಕೊಡಬೇಕಾಗಿದೆ.

## ಶರಣರ ನಾಡಿನಲ್ಲಿ ಅಕ್ಷರ ದಾಸೋಹ




ಈ ಸಲದ ೮೫ ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ೨೦೨೦ ರ ಫೆಬ್ರುವರಿ ೫,೬ ಹಾಗೂ ೭ ರಂದು ಕಲಬುರ್ಗಿಯ ವಿಶ್ವವಿದ್ಯಾಲಯದ ಆವರಣದಲ್ಲಿ ನಾಡಿನ ಖ್ಯಾತ ಸಾಹಿತಿ ಡಾ. ಎಚ್.ಎಸ್.ವೆಂಕಟೇಶಮೂರ್ತಿಯವರ ಅಧ್ಯಕ್ಷತೆಯಲ್ಲಿ ಅದ್ದೂರಿಯಾಗಿ ಅಷ್ಟೇ ಅಚ್ಚುಕಟ್ಟಾಗಿ ಜರುಗಿತು. ಶರಣಬಸವೇಶ್ವರ ದೇವಸ್ಥಾನ ,ಖ್ವಾಜಾಬಂದೇನವಾಜ್ ದರ್ಗಾ,ಬುದ್ಧವಿಹಾರ,ಸೇಂಟ್ ಮೇರಿ ಚರ್ಚ್,ಕವಿರಾಜಮಾರ್ಗ ಕೃತಿ,ಸನ್ನತಿಶಾಸನ,ಬಹಮನಿ ಸುಲ್ತಾನರ ಕೋಟೆ ,ತಾಯಿ ಭುವನೇಶ್ವರಿಯ ಭಾವಚಿತ್ರಗಳನ್ನೊಳಗೊಂಡ ಲಾಂಛನವು ಕನ್ನಡನಾಡಿನ ಭಾವೈಕ್ಯತೆಯ ದ್ಯೋತಕವಾಗಿತ್ತು.

ಶರಣರ ನಾಡಿನಲ್ಲಿ ನಡೆದ ಈ ಅಕ್ಷರದಾಸೋಹದಲ್ಲಿ ಲಕ್ಷಾಂತರ ಜನರು ಪಾಲ್ಗೊಂಡಿದ್ದು ಸುಮಾರು ೨೧ ಕ್ಕೂ ಅಧಿಕ ಗೋಷ್ಠಿಗಳು,ಡೊಳ್ಳು ಕುಣಿತ ,ಭರತನಾಟ್ಯ ,ಗಾಯನಗಳಂಥ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಅವ್ಯಾಹತವಾಗಿ ನಡೆದವು. ೪೦೦ಕ್ಕೂ ಅಧಿಕ ಕನ್ನಡ ಪುಸ್ತಕಮಳಿಗೆಗಳು, ಚಿತ್ರಸಂತೆ-ಚಿತ್ರಕಲಾ ಪ್ರದರ್ಶನ,ಶಿಲ್ಪಕಲಾ ಪ್ರದಶನ ಹಾಗೂ ಮಾರಾಟ ,೨೦೦ಕ್ಕೂ ಅಧಿಕ ವಾಣಿಜ್ಯ ಮಳಿಗೆಗಳಿದ್ದು 'ಲೇಖಕರ ಕಟ್ಟೆ'ಈ ಸಲದ ವೈಶಿಷ್ಟ್ಯವಾಗಿತ್ತು. ಸುಮಾರು ೧೨೦೦ ಜನ ಬಾಣಸಿಗರು ನೆರೆದ ಲಕ್ಷಾಂತರ ಸಾಹಿತ್ಯ ಪ್ರೇಮಿಗಳಿಗೆ ರೊಟ್ಟಿ -ಪುಂಡಿಪಲ್ಯೆ,ಎಣಗಾಯಿ ,ಶೇಂಗಾ ಹಿಂಡಿ, ಮೈಸೂರಪಾಕು,ಹೋಳಿಗೆ,ಬೂಂದಿಗಳನ್ನು ಯಥೇಚ್ಛವಾಗಿ ಉಣಬಡಿಸಿದರು. ಒಟ್ಟಾರೆ ಈ ಸಲದ ಸಾಹಿತ್ಯ ಸಮ್ಮೇಳನ ಭಾಗವಹಿಸಿದವರ ಹೊಟ್ಟೆ -ನೆತ್ತಿಗಳೆರಡನ್ನೂ ತಣಿಸಿದ್ದೊಂದು ವಿಶೇಷ .

■ ಗೌರಿ ಪ್ರಸನ್ನ

## "ಕುದಿ ಎಸರು" ಪುಸ್ತಕ ವಿಮರ್ಶೆ



ಡಾ.ವಿಜಯಾ ಅವರು ಪತ್ರಕರ್ತೆ ,ಲೇಖಕಿ,ಚಿಂತಕಿ.ನಾಟಕ-ಸಿನೆಮಾ ರಂಗಗಳಲ್ಲಿಯೂ ಇವರಿಗೆ ಪರಿಶ್ರಮವಿದೆ.ಅನೇಕ ಗ್ರಂಥ ಸಂಪಾದನಾ ಶ್ರೇಯಸ್ಸೂ ಕೂಡ ಅವರಿಗೆ ಸಲ್ಲಬೇಕು. ಅಕ್ಕಿಬೆಂದು ಅನ್ನವಾಗಲು ,ಹುಡಿಹಿಟ್ಟು ಉಣ್ಣಲು ಯೋಗ್ಯವಾಗಲು ಕುದಿಎಸರಿನಿಂದ ಮಾತ್ರ ಸಾಧ್ಯ .ತಮ್ಮ ಕುದಿ ಎಸರಿನಲ್ಲಿಯೂ ಓದುಗರಿಗೆ ರಸಗವಳ ಬಡಿಸಿದ ಅವರಿಗೆ ಧನ್ಯವಾದಗಳು ಹಾಗೂ ಅಭಿನಂದನೆಗಳು. ಅವರೇ ಹೇಳುವಂತೆ ' personal is political' ಅನ್ನುವಂಥ ಸ್ತ್ರೀವಾದದ ನಿಯಮವನ್ನು ಅದರಲ್ಲಿ ಬಯಲಿಗೆಳೆದಿದ್ದಾರೆ.ಒಳಗೊಳಗೇ ಕುದಿವ ಅನೇಕ ಹೆಣ್ಣುಮಕ್ಕಳ ನೋವಿಗೆ ದನಿಯಾದ ಧನ್ಯತೆ ತನಗಿದೆ ಎಂದಿದ್ದಾರೆ ವಿಜಯಮ್ಮ.

ಈ ಸಲದ ಕೇಂದ್ರ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿಯು ನಾಡಿನ ಹಿರಿಯ ಲೇಖಕಿ ಡಾ.ವಿಜಯಾ ಅವರ 'ಕುದಿ ಎಸರು' ಆತ್ಮ ಕಥೆಗೆ ದೊರೆತಿದೆ.ಹೆಣ್ಣುಜೀವವೊಂದರ ಸುದೀರ್ಘ ಸಂಘರ್ಷ,ಆ ಸಂಘರ್ಷಗಳ ಬಲದಿಂದಲೇ ಸಾರ್ಥಕ ಬದುಕು ಕಟ್ಟಕೊಂಡು ತನ್ನ ಸುತ್ತಲಿದ್ದವರ ಬದುಕು-ಕನಸುಗಳಿಗೂ ಬಣ್ಣ ತುಂಬಿದ ಕಥೆ...ತುಳಿತಕ್ಕೊಳಗಾದಷ್ಟೂ ಪುಟಿದೆದ್ದು ಬೆಳೆದು ನಿಂತ ಅದಮ್ಯ ಚೇತನವೊಂದರ ಕಥೆ.

ಅಕ್ಯಾಡೆಮಿಯ ಅಧ್ಯಕ್ಷರಾದ ಚಂದ್ರಶೇಖರ ಕಂಬಾರರು ಪ್ರಶಸ್ತಿಪ್ರದಾನ ಮಾಡಿದ್ದು ,ಪ್ರಶಸ್ತಿಯು ಒಂದು ಲಕ್ಷ ನಗದು ಹಾಗೂ ಫಲಕವನ್ನೊಳಗೊಂಡಿದೆ.'ನಾಕುತಂತಿ'ಪ್ರಕಾಶನದಿಂದ ಈಗಾಗಲೇ ಮೂರು ಮುದ್ರಣಗಳನ್ನು ಕಂಡ ಇದು ಪ್ರತಿಯೊಬ್ಬ ಕನ್ನಡಿಗನೂ ಓದಲೇಬೇಕಾದ ಕೃತಿಯಾಗಿದೆ.

**ಗೌರಿ ಪ್ರಸನ್ನ**

## ಕಾಣದ ಕಡಲಿಗೆ ಹಂಬಲಿಸಿ ಹೋದವರಿಗೆ ಶ್ರಾದ್ಧಾಂಜಲಿ

### ಶ್ರೀ ಶಿವಕುಮಾರ್

ಶ್ರೀ ಶಿವಕುಮಾರ್ ಅವರು ೧೬/೧೨/೨೦೧೯ ರಂದು ತೀರಿಕೊಂಡಿದ್ದಾರೆ. ಅವರು ಕನ್ನಡ ಬಳಗದ ಆಜೀವ ಸದಸ್ಯರಾಗಿ ಬಳಗದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮೈಸೂರಿನ NIE ಯಲ್ಲಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮುಗಿಸಿ ಸ್ವಲ್ಪಕಾಲ ಕರ್ನಾಟಕದ ಪಿ. ಡಬ್ಲ್ಯೂ. ಡಿ ವಿಭಾಗದಲ್ಲಿ ಕೆಲಸಮಾಡಿ ನಂತರ ಇಂಗ್ಲೆಂಡಿಗೆ ಬಂದು ಆಕ್ಸ್ ಫೋರ್ಡ ನಲ್ಲಿ ಇರುವ ಥೇಮ್ಸ್ ವಾಟರ್ ಸಂಸ್ಥೆಯಲ್ಲಿ ದುಡಿದರು. ಶಿವಕುಮಾರ್ ಅವರು ಪತ್ನಿ ವಿಜಯ, ಇಬ್ಬರು ಗಂಡು ಮಕ್ಕಳು ಮತ್ತು ನಾಲ್ಕು ಮೊಮ್ಮಕ್ಕಳನ್ನು ಅಗಲಿದ್ದಾರೆ. ಶಿವಕುಮಾರ್ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ.

# "ಇಂಡಿಯಾ  vs ಇಂಗ್ಲೆಂಡ್, ಆದರೆ ಕ್ರಿಕೆಟ್ ಅಲ್ಲ" ಸಿನಿಮಾದ ಒಂದು ಅನುಭವ




ನನ್ನ ಮಗಳು ಸಿರಿ ಈ ಚಿತ್ರದ ಆಡಿಷನ್ನಲ್ಲಿ ಸಫಲಳಾಗಿದ್ದಾಳೆ ಎಂದು ಕೇಳಿ ನನಗೆ ಮತ್ತು ನನ್ನ ಶ್ರೀಮತಿಗೆ ಬಹಳ ಸಂತೋಷವಾಗಿತ್ತು. ನಾವುಗಳು ಚಿತ್ರೀಕರಣ ಆರಂಭವಾಗುವುದಕ್ಕೆ ಕಾಯುತ್ತಿದ್ದೆವು . ನಮಗೆ ಅದು ಒಂದು ಹೊಸ ಅನುಭವ. ಸಿರಿಗೆ ಕ್ಯಾಮೆರಾ ಎದುರಿಸಿದ ಅನುಭವ ಇತ್ತು ಆದರೆ ಕನ್ನಡ ಮತ್ತು ಸಿನಿಮಾದಲ್ಲಿ ಮಾಡಿದ್ದ ಅನುಭವ ಇರಲಿಲ್ಲ. ನಿರ್ದೇಶಕ ಶ್ರೀ ನಾಗತಿಹಳ್ಳಿ 'ಮೇಷ್ಟ್ರು' ಮೊದಲ ಹಂತದ ಚಿತ್ರೀಕರಣ ಲಂಡನ್ನಲ್ಲಿ ಪೂರೈಸಿದರು. ಸಿರಿಯದು ನಾಯಕ ನಟ ವಸಿಷ್ಠ ಸಿಂಹ ಅವರ ತಂಗಿಯ ಪಾತ್ರ, ಸಿನಿಮಾದಲ್ಲಿ ಸಿರಿಯ ಪಾತ್ರದ ತಂದೆ ತಾಯಿಗಳು ಶ್ರೀ ಪ್ರಕಾಶ್ ಬೆಳವಾಡಿ ಮತ್ತು ಸುಮಲತಾ ಅಂಬರೀಶ್.

ಚಿತ್ರದ ಎರಡನೇ ಹಂತದಲ್ಲಿ ಸಿರಿಯ ಪಾತ್ರವಿದ್ದು, ಚಿತ್ರೀಕರಣ ಕಾರ್ಡಿಫಿನಲ್ಲಿ ನಡೆಯುವುದ್ದಿತ್ತು. ಹೀಗಾಗಿ ನಾವುಗಳು ಆ ವರ್ಷ ಕಾರ್ಡಿಫ್ ನಲ್ಲಿ ನಮ್ಮ ಬೇಸಿಗೆಯ ರಜಾ ದಿನಗಳನ್ನು ಕಳೆಯಬೇಕೆಂದು ನಿರ್ಧರಿಸಿದೆವು. ಕಾರ್ಡಿಫ್ ಹೋಟೆಲ್ ಒಂದರಲ್ಲಿ ನಮ್ಮ ವಾಸ್ತವ್ಯ .ಮೊದಲ ದಿನ ಮಳೆಯಿಂದ ಶೂಟಿಂಗ್ ಕ್ಯಾನ್ಸಲ್ ಆಯ್ತು. ಎರಡನೇ ದಿನ ನಮ್ಮನ್ನು ಹತ್ತಿರದ ಒಂದು ಭವ್ಯ ಮನೆಗೆ ಬರ ಹೇಳಿದರು ಅಲ್ಲಿ ಶೂಟಿಂಗ್ ನಡೆಯುತ್ತಿತ್ತು .ಸಿನಿಮಾದಲ್ಲಿ ಅದು ಸಿರಿ ಹಾಗೂ ಅವರ ತಂದೆ ತಾಯಿ ಇರುವ ಮನೆ .ಬೆಳಗ್ಗೆ ಪ್ರಕಾಶ್ ಬೆಳವಾಡಿ ಸಿಕ್ಕರೂ ನಾನು ಅವರನ್ನು ಹಿಂದೆ ಭೇಟಿ ಮಾಡಿರಲಿಲ್ಲ ಹೀಗಾಗಿ ಅವರ ಪರಿಚಯ ಇರಲಿಲ್ಲ. ಅವರ ತಂದೆ ಮೇಕಪ್ ನಾಣಿ ನನ್ನ ನಾಟಕದ ಗುರುಗಳಾಗಿದ್ದರು. ನಾನು ಅವರ ಜೊತೆ ಮಾತನಾಡುತ್ತಾ ನನ್ನ ನಾಟಕದ ನಂಟಿನ ಬಗ್ಗೆ ತಿಳಿಸಿ ಹಲವಾರು ನಾಟಕದ ಗೆಳೆಯರ ನೆನಪು ಮಾಡಿಕೊಂಡೆ. ಅವರೆಲ್ಲರೂ ಪ್ರಕಾಶ್ ಅವರ ಗೆಳೆಯರಾಗಿದ್ದು ಹಳೆ ನೆನಪುಗಳನ್ನು ಹಂಚಿ ಕೊಂಡೆವು.

ನಿರ್ದೇಶಕರು ಚಿತ್ರದ ಕಥೆಯನ್ನು ನಮಗಾಗಲಿ ಅಥವಾ ಸಿರಿಗಾಗಲಿ ತಿಳಿಸಿರಲಿಲ್ಲ ಹೀಗಾಗಿ ನಮಗೆ ಕುತೂಹಲವಿತ್ತು ಸಿನಿಮಾ ಸೆಟ್ಟಿನಲ್ಲಿಯೆ ನಿರ್ದೇಶಕರು ಡೈಲಾಗ್ ಗಳನ್ನು ಬರೆಯುತ್ತಿದ್ದರು. ಇತರ ನಟ, ನಟಿಯರು ಮತ್ತು ತಂತ್ರಜ್ಞರು ಕ್ರಮೇಣ ಪರಿಚಯವಾದರು. ದಿನವೂ ಮಧ್ಯಾಹ್ನ ಸಿನಿಮಾ ಸೆಟ್ಟಿಗೆ ಊಟ ಬರುತ್ತಿತ್ತು. ಸಾಯಂಕಾಲ ಯಾವುದಾದರೂ ಒಬ್ಬ ಪ್ರೊಡ್ಯೂಸರ್ ಮನೆಯಲ್ಲಿ ಅಥವಾ - ಹೋಟೆಲಿನಲ್ಲಿ ಊಟ ಅಥವಾ ಪಾರ್ಟಿ ಇರುತ್ತಿತ್ತು.ರಾತ್ರಿ ಪಾರ್ಟಿಯ ನಂತರ ಎಲ್ಲರ ಕ್ರಿಯೇಟಿವಿಟಿ ಜಾಸ್ತಿಯಾಗುತ್ತಿತ್ತು .ದಿನಗಳು ಕಳೆದಿದ್ದು ಗೊತ್ತಾಗಲಿಲ್ಲ.

ಸಿರಿಗೆ ಕನ್ನಡ ಓದಲು ಮತ್ತು ಬರೆಯಲು ಬರುವುದೇ ಇಲ್ಲ. ಹೀಗಾಗಿ ಅವಳ ಅಮ್ಮ ರಮ್ಯಾ ಇಂಗ್ಲಿಷಿನಲ್ಲಿ ಡೈಲಾಗ್ಗಳನ್ನು ಬರೆದುಕೊಡುತ್ತಿದ್ದರು. ಅದನ್ನು ಸಿರಿ ಅಭ್ಯಾಸ ಮಾಡುತ್ತಿದ್ದಳು. ಡೈರೆಕ್ಟರ್ ಮತ್ತು ಸಹಾಯ ನಿರ್ದೇಶಕರುಗಳು ಸನ್ನಿವೇಶ ಮತ್ತು ಅವರ ನಿರೀಕ್ಷೆಗಳನ್ನು ತಿಳಿಸುತ್ತಿದ್ದರು. ಸಿರಿ ಅದಕ್ಕೆ ತಕ್ಕಂತೆ ಅಭಿನಯಿಸುತ್ತಿದ್ದಳು. ನಾನು ಸ್ವಲ್ಪ ದೂರವೇ ಉಳಿದು ನನ್ನ ಅಭಿನಯ ಶೈಲಿಯನ್ನು ಅವಳ ಮೇಲೆ ಹೇರಲು ಹೋಗಲಿಲ್ಲ.

ಚಿತ್ರೀಕರಣ ಮುಗಿದಿದ್ದೇ ಗೊತ್ತಾಗಲಿಲ್ಲ.ಒಂದು ದಿನ ಪ್ಯಾಕ್ ಅಪ್ ಅಂದರು. ಕೆಲವು ತಿಂಗಳ ನಂತರ ಸಿರಿ ಬೆಂಗಳೂರಿಗೆ ಹೋಗಿ ಡಬ್ಬಿಂಗ್ ಕಾರ್ಯ ನಿರ್ವಹಿಸಿ ಬಂದಳು ನಿರ್ದೇಶಕರು ಅವಳ ಕೆಲಸ ನೋಡಿ ಸಂತೋಷಪಟ್ಟರು.ಹಲವು ತಿಂಗಳ ನಂತರ ಸಿನಿಮಾ ಲಂಡನ್ ಮತ್ತು ಕಾರ್ಡಿಫ್ ನಗರದಲ್ಲಿ ಪ್ರೀಮಿಯರ್ ಆಯಿತು. ಅದಕ್ಕೆ ಶ್ರೀಮತಿ ಸುಮಲತಾ ಅಂಬರೀಶ್ ಮತ್ತು ನಿರ್ದೇಶಕ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಬಂದಿದ್ದರು. ಈ ಚಿತ್ರ ಹಲವಾರು ಎನ್ನಾರೈ ಕನ್ನಡಿಗರು ಮುಖ್ಯವಾಗಿ ವೇಲ್ಸ್ ನಲ್ಲಿ ಇರುವ ಕನ್ನಡಿಗರು ಸೇರಿ ನಿರ್ಮಿಸಿದ ಚಿತ್ರ. ಚಲನಚಿತ್ರದಲ್ಲಿ ಖಳನಟನಾಗಿ ಕೆಲಸ ಮಾಡಿರುವ ಶ್ರೀ ಗೋಪಾಲ ಕುಲಕರ್ಣಿ ಅವರು ಒಳ್ಳೆಯ ಗೆಳೆಯರಾದರು. ವೇಲ್ಸಿನಲ್ಲಿರುವ ಕನ್ನಡ ಚಿತ್ರದ ನಿರ್ಮಾಪಕರುಗಳು ಒಳ್ಳೆಯ ಸ್ನೇಹಿತರಾದರು. ಚಿತ್ರದ ಗೀತೆಯೊಂದನ್ನು ಬರೆದಿರುವ ಶ್ರೀ ಮತ್ತೂರು ನಂದಕುಮಾರ್ ಅವರ ಪರಿಚಯವೂ ಆಯಿತು.

ಕನ್ನಡ ಸಿನಿಮಾ ರಂಗ ಹೆದರಿಕೆಯಿಂದ ನಡೆಯುತ್ತಿರುವ ಸಂದರ್ಭದಲ್ಲಿ ಎನ್ನಾರೈ ಕನ್ನಡಿಗರು ಧೈರ್ಯದಿಂದ ಚಲನಚಿತ್ರವನ್ನು ನಿರ್ಮಿಸಿದ್ದಕ್ಕೆ ನಾವು ಅವರನ್ನು ಮೆಚ್ಚಬೇಕು. ಮುಖ್ಯವಾಗಿ ಇಂಗ್ಲೆಂಡಿನಲ್ಲಿ ಕನ್ನಡ ಚಲನಚಿತ್ರದ ಚಿತ್ರೀಕರಣ ನಡೆಯಿತು ಎನ್ನುವುದು ಹೆಮ್ಮೆಯ ವಿಚಾರ. ನಿರ್ದೇಶಕ ಹಾಗೂ ಇಲ್ಲಿಯ ನಿರ್ಮಾಪಕರಗಳನ್ನು ಒಂದೆಡೆ ಸೇರಿಸುವಲ್ಲಿ ಕನ್ನಡ ಬಳಗದ ಶ್ರೀಮತಿ ಸುಮನಾ ಗಿರೀಶ್ ಶ್ರಮವೂ ಸೇರಿತ್ತು.

**ಡಾ. ಗಿರಿಧರ್ ಹಂಪಾಪುರ**

## ಡಾ. ಶಿಬಾನಿ ನಿಕಮ್



ನಮ್ಮ ಬಳಗದ ಅಧ್ಯಕ್ಷಿಣಿ ಶೀಮತಿ ಸ್ನೇಹ ಮತ್ತು ಅರವಿಂದ್ ಕುಲಕರ್ಣಿಯವರ ಸೊಸೆ ಡಾ.ಶಿಬಾನಿ ನಿಕಮ್ ಅವರು ಮೆಡಿಕಲ್ ಆಂಕಾಲಜಿಸ್ಟ್ ತಜ್ಞರಾಗಿ ಆಕ್ಸ್ ಫೋರ್ಡಿನ ಚರ್ಚಿಲ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇತ್ತೀಚೆಗೆ ಅವರು ರಾಷ್ಟ್ರೀಯ ಕ್ಯಾನ್ಸರ್ ಸಂಸ್ಥೆಯ ಗೈನಕಾಲಜಿ ವಿಭಾಗಕ್ಕೆ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಅವರು ಈ ಒಂದು ಗೌರವಕ್ಕೆ ಪಾತ್ರರಾದ ಮೊಟ್ಟ ಮೊದಲ ಮಹಿಳಾ ತಜ್ಞರು. - ಈ ಸಂಸ್ಥೆಯು ಕ್ಯಾನ್ಸರ್ ಕಂಡು ಹಿಡಿಯುವ , ತಡೆಗಟ್ಟುವ ಹಾಗೂ ಚಿಕಿತ್ಸಾ ಕ್ರಮಗಳನ್ನು ಉತ್ತಮಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ. ಡಾ. ಶಿಬಾನಿ ನಿಕಮ್ ಅವರು ನಮ್ಮ ಬಳಗದ ಆಜೀವ ಸದಸ್ಯರು. ಅವರ ಈ ಹೆಗ್ಗಳಿಕೆಗೆ ಹೃತ್ಪೂರ್ವಕ ಅಭಿನಂದನೆಗಳು. ಡಾ ಶಿಬಾನಿ ನಿಕಮ್ ಅವರ ನೇತೃತ್ವದಲ್ಲಿ ಕ್ಯಾನ್ಸರ್ ಸಂಸ್ಥೆ ಇನ್ನು ಎತ್ತರಕ್ಕೆ ಬೆಳೆಯಲಿ ಮತ್ತು ಕ್ಯಾನ್ಸರ್ ರೋಗಿಗಳು ನೆಮ್ಮದಿಯನ್ನು ಕಾಣಲಿ ಎಂದು ಹಾರೈಸೋಣ.

## ಅನಿವಾಸಿ ಸಿನಿತಾರೆ ಸಿರಿ ಹಂಪಾಪುರ



ನಾನು ಏಳು ವರ್ಷ ಇದ್ದಾಗ ಅಭಿನಯ ತರಗತಿಗೆ ಹೋಗಲು ಆರಂಭಿಸಿದೆ. ಟೀನೇಜ್ ವಯಸ್ಸಿಗೆ ಬಂದಾಗ ಶ್ರೀಮತಿ ಅಮಾಂಡಾ ಫೆರಕಲೊ ಸ್ಟೇಜ್ ಮತ್ತು ಫಿಲ್ಮ್ ಶಾಲೆಗೆ ಸೇರಿದೆ . ದಿವಂಗತ ಅಮಾಂಡ ಕೆಲವು ವರ್ಷಗಳ ಕಾಲ ನನಗೆ ಏಜೆಂಟ್ ಆಗಿ ಕಾರ್ಯನಿರ್ವಹಿಸಿದರು ಹಾಗೂ ಹಲವಾರು ಕೆಲಸಗಳನ್ನು ಕೊಡಿಸಿದರು. ನಂತರ ಬೋಲ್ಟನ್ನಲ್ಲಿರುವ ಯೂತ್ ಥಿಯೇಟರ್ ಸದಸ್ಯೆಯಾಗಿ ಅಲ್ಲಿನ ನಾಟಕಗಳಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದೆ. ಲಾನಕ್ಯಾಸ್ಟರ್ ವಿಶ್ವವಿದ್ಯಾನಿಲಯದಲ್ಲಿ ಫಿಲ್ಮ್ ಮತ್ತು ಮೀಡಿಯಾ ಸ್ಟಡೀಸ್ ನಲ್ಲಿ ಓದುತ್ತಿರುವಾಗ ಮೊದಲು LA1TV ಯಲ್ಲಿ ನ್ಯೂಸ್ ಪ್ರೆಸೆಂಟರ್ ನಂತರ ಪ್ರೊಡ್ಯೂಸರ್ ಆಗಿ ಕೆಲಸ ನಿರ್ವಹಿಸಿದ್ದು ಕೆಲ ಕಾಲ ವಿದ್ಯಾರ್ಥಿಗಳ ಟಿವಿ ಸ್ಟೇಷನ್ ಮ್ಯಾನೇಜರ್ ಕೆಲಸ ಮಾಡಿದೆ. ಒಂದು ವರ್ಷಗಳ ಕಾಲ ನಾನು ಏನ್ ಯು ಎಸ್ ಜರ್ನಲಿಸ್ಟ್ ಆಗಿ ಕೆಲಸ ಮಾಡಿದೆ . ೨೦೦೧೮ರಲ್ಲಿ ನಾನು ನಿರ್ಮಾಣ ಮಾಡಿ ಮತ್ತು ನಿರೂಪಿಸಿದ್ದ ಕರೆಂಟ್ ಅಫೇರ್ಸ್ ಕಾರ್ಯಕ್ರಮಕ್ಕೆ ನ್ಯಾಷನಲ್ ಸ್ಟೂಡೆಂಟ್ಸ್ ಟೆಲಿವಿಷನ್ ಅವಾರ್ಡ್ ಪ್ರಶಸ್ತಿ ಬಂದಿತ್ತು. ಪ್ರಸ್ತುತ ಲಂಡನ್ ಸಿಟಿ ವಿಶ್ವವಿದ್ಯಾನಿಲಯದಲ್ಲಿ ಬ್ರಾಡ್ಕಾಸ್ಟ್ ಜರ್ನಲಿಸಂ ನಲ್ಲಿ ಸ್ನಾತಕೋತ್ತರ ಪದವಿ ಮಾಡುತ್ತಿದ್ದೇನೆ. ಆಗಾಗ ಬಿಬಿಸಿ, ಹಾಗೂ ಸ್ಕೈ ನ್ಯೂಸ್ ಚಾನೆಲ್ ಗೋಸ್ಕರ ಕೆಲಸ ಮಾಡುತ್ತೇನೆ. ಕನ್ನಡ ಸಿನಿಮಾ ಅವಕಾಶ ಸಿಕ್ಕಿದಾಗ ನನಗೆ ಸ್ವಲ್ಪ ಹೆದರಿಕೆಯೇ ಆಗಿತ್ತು ಯಾಕೆಂದರೆ ಇಂಗ್ಲಿಷ್ ಆಕ್ಸೆಂಟ್ ಅಲ್ಲಿ ಕನ್ನಡ ಮಾತನಾಡುತ್ತೇನೆ ಹಾಗೂ ಕನ್ನಡ ಓದಲು ಬರುವುದಿಲ್ಲ.ಆದರೆ ಕನ್ನಡ ಮಾತನಾಡಲು ಬರುವುದರಿಂದ ನಾನು ಎಲ್ಲ ಡೈಲಾಗ್ಗಳನ್ನು ಇಂಗ್ಲಿಷ್ನಲ್ಲಿ ಬರೆದುಕೊಂಡು ಕನ್ನಡದಲ್ಲಿ - ಒಪ್ಪಿಸಿದೆ. ಶ್ರೀಯುತ ನಾಗತಿಹಳ್ಳಿ ಚಂದ್ರಶೇಖರ್ ಮೇಷ್ಟ್ರು ಸುಮಲತಾ ಅಂಬರೀಶ್, ಮಾನ್ವಿತಾ ಹರೀಶ್ ಹಾಗೂ ಪ್ರಕಾಶ್ ಬೆಳವಾಡಿ ಚಿತ್ರೀಕರಣದ ವೇಳೆಯಲ್ಲಿ ನನಗೆ ಮಾರ್ಗದರ್ಶನ ಮಾಡಿದರು.

ನನ್ನ ಹಾಗೆ ಎಲ್ಲಾ ಕನ್ನಡಿಗ ಮತ್ತು ಭಾರತೀಯ ಮಕ್ಕಳುಗಳು ಮಾಧ್ಯಮ ಮತ್ತು ಕಲಾ ಜಗತ್ತಿಗೆ ಬರಬೇಕೆಂಬುದು ನನ್ನ ಬಯಕೆ. ನನ್ನ ಪ್ರಕಾರ ಇಲ್ಲಿರುವ ಕನ್ನಡಿಗ ತಂದೆ ತಾಯಿಯರು ಡಾಕ್ಟರುಗಳ ಆದುದರಿಂದ ತಮ್ಮ ಮಕ್ಕಳನ್ನು ಡಾಕ್ಟರ್ ಗಳನ್ನಾಗಿ ಪ್ರೋತ್ಸಾಹಿಸುತ್ತಾರೆ, ಆದರೆ ಈ ಟ್ರೆಂಡ್ ಬಿಟ್ಟು ಮಕ್ಕಳು ಕಲಾ ಕ್ಷೇತ್ರ ಗಳಲ್ಲಿ ತಾವು ತೊಡಗಿಕೊಳ್ಳಬೇಕು ಎನ್ನುವುದು ನನ್ನ ಅಭಿಪ್ರಾಯ. ಕನ್ನಡ ಸಿನಿಮಾದಲ್ಲಿ ಕೆಲಸ ಮಾಡಲು ಸಿಕ್ಕಿದ್ದುನನ್ನ ಅದೃಷ್ಟ ಮತ್ತು ಹೆಮ್ಮೆಯ ವಿಚಾರ, ಅದಕ್ಕೆ ನಾನು ಋಣಿ ಕೂಡ. ಆದರೆ ನಾನು ಬ್ರಾಡ್ಕಾಸ್ಟ್ ಜರ್ನಲಿಸ್ಟ್ ಆಗಿ ಕೆಲಸ ಮುಂದುವರಿಯಲು ಅಪೇಕ್ಷಿಸುತ್ತೇನೆ ಹಾಗೆಂದ ಮಾತ್ರಕ್ಕೆ ಕನ್ನಡ ಸಿನಿಮಾದಲ್ಲಿ ಮುಂದೆ ಅವಕಾಶಗಳು ಸಿಕ್ಕಲ್ಲಿ ಖಂಡಿತವಾಗಿಯೂ ನಟಿಸುತ್ತೇನೆ.

**(ಸಂ)** - ಸಿರಿಗೆ ಅಭಿನಂದನೆಗಳು, ಸಿರಿ ಮಾಧ್ಯಮ ಕ್ಷೇತ್ರದಲ್ಲಿ ಇನ್ನು ಎತ್ತರಕ್ಕೆ ಬೆಳೆಯಲಿ ಹಾಗು ಇನ್ನೂ ಹೆಚ್ಚಿನ ಕನ್ನಡ ಚಿತ್ರಗಳಲ್ಲಿ ಭಾಗವಹಿಸಲಿ ಎಂದು ಆಶಿಸೋಣ.

**ಸಿರಿ ಹಂಪಾಪುರ** (ಮೂಲ ಲೇಖನ ಇಂಗ್ಲೀಷಿನಲ್ಲಿ)

**ಡಾ. ಗಿರಿಧರ್ ಹಂಪಾಪುರ** (ಕನ್ನಡ ಅನುವಾದ)